ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭಾ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 17/3/2020

## ವರ್ಗಾವಣೆ ನಿಯಂತ್ರಣ ವಿಧೇಯಕಕ್ಕೆ ವಿಧಾನಸಭೆ ಅಸ್ತು

# ಏಪ್ರಿಲ್, ಮೇನಿಂದಲೇ ಶಿಕ್ಷಕರ ವರ್ಗ

17/3/20

**ವಿಕ ಸುದ್ದಿಲೋಕ** ಬೆಂಗಳೂರು

'ಶಿಕ್ಷಕರ ವರ್ಗಾವಣೆ ನಿಯಂತ್ರಣ' ವಿಧೇಯಕಕ್ಕೆ ವಿಧಾನಸಭೆ ಸರ್ವಾನುಮತದಿಂದ ಅಂಗೀಕರಿಸಿದೆ. ಏಪ್ರಿಲ್, ಮೇ ತಿಂಗಳಿಂದಲೇ ವರ್ಗಾವಣೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಇದರೊಂದಿಗೆ ಜೂನ್‌ನಲ್ಲಿ ವರ್ಗಾವಣೆಗೊಂಡ ಶಾಲೆಗಳಿಗೆ ಶಿಕ್ಷಕರ ನಿಯೋಜನೆಗೊಳಿಸಲು ಸರಕಾರ ನಿರ್ಧರಿಸಿದೆ.

ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣ ಎಸ್.ಸುರೇಶ್ ಕುಮಾರ್ ಕಳೆದ ಮಂಗಳವಾರ ಮಂಡಿಸಿದ್ದ ವಿಧೇಯಕವನ್ನು ಸೋಮವಾರ ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು. ವಿಧೇಯಕದ ಪ್ರಮುಖ ವಿಚಾರಗಳ ಬಗ್ಗೆ ಸದನಕ್ಕೆ ಮಾಹಿತಿ ನೀಡಿದ ಸುರೇಶ್ ಕುಮಾರ್ 'ಶಿಕ್ಷಣ, ಶಿಕ್ಷಕ, ವಿದ್ಯಾರ್ಥಿ ' ಹಿತ ದೃಷ್ಟಿಯಿಂದ ಈ ಕಾಯಿದೆ ಜಾರಿಗೆ ತರಲಾಗುತ್ತಿದೆ. ಇದು ಶಿಕ್ಷಕ ಸ್ನೇಹಿ ಜತೆಗೆ ವಿದ್ಯಾರ್ಥಿ ಹಿತಚಿಂತನೆಯ ಉದ್ದೇಶ ಹೊಂದಿದೆ ಎಂದು ತಿಳಿಸಿದರು.

ಈ ವಿಧೇಯಕಕ್ಕೆ ಸದನ ಸೋಮವಾರ ಅಂಗೀಕಾರ ನೀಡಿದರೆ, ಮಂಗಳವಾರ ಪರಿಷತ್‌ನ ಒಪ್ಪಿಗೆ ಪಡೆದು ತಕ್ಷಣ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು. ಮುಂದಿನ ಶೈಕ್ಷಣಿಕ ವರ್ಷದಲ್ಲೇ ಜಾರಿ ಮಾಡಬೇಕಿರುವುದರಿಂದ ಏಪ್ರಿಲ್ ಹಾಗೂ ಮೇನಲ್ಲಿ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಿ, ಜೂನ್‌ನಿಂದ ಹೊಸ ಶಾಲೆಗಳಿಗೆ ಕರ್ತವ್ಯ ನಿಯೋಜಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಇದಕ್ಕೆ ಸಮ್ಮತಿ ವ್ಯಕ್ತಪಡಿಸಿದರು. ಹಿರಿಯ ಸದಸ್ಯ ರಮೇಶ್ ಕುಮಾರ್, ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯಕ್ ಸೇರಿದಂತೆ ಕೆಲವರು ಸಣ್ಣಪುಟ್ಟ ಬದಲಾವಣೆಗೆ ಸೂಚನೆ ನೀಡಿದರು. ಆದರೆ ಶೈಕ್ಷಣಿಕ ಹಿತದೃಷ್ಟಿಯಿಂದ ವರ್ಗಾವಣೆ ಕಾಯಿದೆಗೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

**ಕಾಯಿದೆ ಪ್ರಮುಖ ಅಂಶಗಳು**

- ವರ್ಗಾವಣೆ ಕೋರುವುದಕ್ಕೆ ಒಂದು ಶಾಲೆಯಲ್ಲಿ ಕನಿಷ್ಠ ಮೂರು ವರ್ಷಗಳ ಸೇವಾವಧಿ ಕಡ್ಡಾಯ.
- ವಿನಾಯಿತಿಯೊಂದಿಗೆ ವಲಯದ ಉದ್ದಗಲಕ್ಕೂ ಸುತ್ತು ಸರದಿ (ರೊಟೇಷನ್ ) ಸಾಧಿಸಲು ವಲಯವಾರು ವರ್ಗಾವಣೆ.



- ಶಿಕ್ಷಕ ಅಥವಾ ಆತನ ಪತ್ನಿ, ಮಕ್ಕಳು ಚಿಕಿತ್ಸೆ ಲಭ್ಯವಿಲ್ಲದ ಕಾಯಿಲೆ ಕೊನೆ ಹಂತದಲ್ಲಿದ್ದರೆ.
- ನಿಗದಿ ಪಡಿಸಿದ ಅಂಗ ವೈಕಲ್ಯ ಹೊಂದಿದ್ದರೆ.
- 12 ವರ್ಷದೊಳಗಿನ ಅವಲಂಬಿತ ಮಕ್ಕಳು ಹೊಂದಿದ್ದರೆ, ವಿಧವೆ, ವಿದುರ ಅಥವಾ ವಿಚ್ಛೇದಿತ ರಿಗೆ.
- ಸೇನೆಯಲ್ಲಿ ನಿವೃತ್ತಿ ಹೊಂದಿ ಶಾಶ್ವತ ಅಂಗವೈಕಲ್ಯಕ್ಕೆ ಗುರಿಯಾಗಿದ್ದವರಿಗೆ.
- ರಾಜ್ಯ ಅಥವಾ ಕೇಂದ್ರ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಪತಿ ಅಥವಾ ಪತ್ನಿ ಕೆಲಸ ಮಾಡುತ್ತಿದ್ದರೆ
- ಶಿಕ್ಷಕಿ 50 ವರ್ಷ, 55 ವರ್ಷ ಮೀರಿದ ಶಿಕ್ಷಕರಿಗೆ.
- ಗರ್ಭಿಣಿ ಅಥವಾ ವರ್ಷದೊಳಗಿನ ಮಗು ಹೊಂದಿದ ಶಿಕ್ಷಕಿಗೆ ವಿನಾಯಿತಿ ಕಲ್ಪಿಸಲಾಗಿದೆ. ಮ್ಯಾನ್ಯುವಲ್ ಕೌನ್ಸೆಲಿಂಗ್ ಕಡ್ಡಾಯ ನಿಷೇಧಿಸಲಾಗಿದೆ.

- ವಿಶೇಷ ಚೇತನ ವ್ಯಕ್ತಿಗಳ ಹಕ್ಕುಗಳ ಕಾಯಿದೆ ಪ್ರಕಾರ ನಿಗದಿಪಡಿಸಿದ ಅಂಗ ವೈಕಲ್ಯ ಹೊಂದಿದ ಶಿಕ್ಷಕರಿಗೆ ವಿನಾಯಿತಿ.
- 50 ವರ್ಷ ತುಂಬಿದ ಶಿಕ್ಷಕಿಯರು ಹಾಗೂ 55 ವರ್ಷ ತುಂಬಿದ ಶಿಕ್ಷಕರಿಗೆ ವಲಯವಾರು ವರ್ಗಕ್ಕೆ ವಿನಾಯಿತಿ.

ಈ ನಾಲ್ಕು ವಿಚಾರವನ್ನು ಈ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಜತೆಗೆ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರ ಲಭ್ಯತೆ ಖಚಿತಪಡಿಸಿಕೊಳ್ಳುವ ಉದ್ದೇಶ ಹೊಂದಲಾಗಿದ್ದು, ಸಿ ಮತ್ತು ಬಿ ವಲಯದ ಶಾಲೆಗಳಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಎ ವಲಯ ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ. ಅನುಪಾತ ಆಧರಿಸಿ ಶಿಕ್ಷಕರನ್ನು ನಿಗದಿತ ಕಾಲಾಂತರದಲ್ಲಿ ಮರು ಹಂಚಿಕೆ ಹಾಗೂ ಮರು ನಿಯೋಜಿಸುವ ಅವಕಾಶವನ್ನೂ ಈ ವಿಧೇಯಕದಲ್ಲಿ ಸೇರ್ಪಡೆ ಮಾಡಲಾಗಿದೆ. ಆದ್ಯತೆಯ ಸ್ಥಳ ನಿಯುಕ್ತಿ ಕೋರುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಜತೆಗೆ ಈ ಪ್ರಕ್ರಿಯೆ ಸುಲಭಗೊಳಿಸುವುದಕ್ಕೆ ಅಗತ್ಯವಾದ ಉಪಬಂಧಗಳನ್ನು ಸೃಜನೆ ಮಾಡಲಾಗಿದೆ.

**ಕೋರಿಕೆ ವರ್ಗಾವಣೆ**

ಒಂದು ಶಾಲೆಯಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದ ಶಿಕ್ಷಕನಿಗೆ ಖಾಲಿ ಹುದ್ದೆಗಳ ಲಭ್ಯತೆ ಹಾಗೂ ಇನ್ನಿತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಗೆ ಕೋರಿಕೆ ಸಲ್ಲಿಸಲು ಹೊಸ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ಹೊರ ಜಿಲ್ಲೆಗೆ ವರ್ಗಾವಣೆ ಕೋರುವುದಕ್ಕೆ ಇತರ ಎಲ್ಲ ಅರ್ಹತಾ ಷರತ್ತುಗಳ ಜತೆಗೆ ಆ ಪ್ರದೇಶದಲ್ಲಿ ಕನಿಷ್ಠ 10 ವರ್ಷ ಕಡ್ಡಾಯ ಸೇವೆ ಸಲ್ಲಿಸಿರಬೇಕು.

ಈ ಮೂರು ವಿಭಾಗದ ವರ್ಗಾವಣೆ ಪ್ರಕ್ರಿಯೆಯನ್ನು ಏಪ್ರಿಲ್ ಮತ್ತು ಮೇನಲ್ಲಿ ನಡೆಯುವ ವರ್ಗಾವಣೆ ಸಂದರ್ಭದಲ್ಲಿ ಕೌನ್ಸೆಲಿಂಗ್ ಮೂಲಕವೇ ನಡೆಸಬೇಕು. ಆ ಬಳಿಕ ಲಿಖಿತ ಕಾರಣಗಳೊಂದಿಗೆ ರಾಜ್ಯ ಸರಕಾರದ ನಿರ್ದೇಶನದ ಮೇರೆಗೆ ವರ್ಗಾವಣೆ ಮಾಡಬಹುದು. ಕ್ರಿಮಿನಲ್ ಚಾರ್ಜ್ ಎದುರಿಸುತ್ತಿರುವ ಹಾಗೂ ಇಲಾಖಾ ಶಿಸ್ತು ಕ್ರಮಕ್ಕೆ ಗುರಿಯಾದ ಶಿಕ್ಷಕನನ್ನು ನಿಗದಿತ ಅವಧಿ ಪೂರೈಸದೇ ಇದ್ದರೂ ಸಿ-ವಲಯದ ಖಾಲಿ ಜಾಗಕ್ಕೆ ವರ್ಗಾವಣೆ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಜತೆಗೆ ಜೇಷ್ಠತೆ ಆಧಾರದ ಮೇಲೆ ವಾರ್ಷಿಕ ಶೇ.15ರಷ್ಟು ಅಥವಾ ರಾಜ್ಯ ಸರಕಾರ ನಿಗದಿ ಮಾಡಿದ ಅನುಸೂಚಿ ಮೀರಿ ವರ್ಗಾವಣೆ ಮಾಡುವಂತಿಲ್ಲ.